# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಸ್ಪೋಕನ್ ಇಂಗ್ಲೀಷ್ ಮತ್ತು ವ್ಯಕ್ತಿತ್ವ ವಿಕಸನದ ತರಬೇತಿ ನೀಡಲು ಸ್ಫೂರ್ತಿಯ ನಡೆ ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

**ಓದಲಾಗಿದೆ:-** 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-176.

*********

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1) ರಲ್ಲಿ 2022-23ನೇ ಸಾಲಿನ ಆಯ-ವ್ಯಯ ಭಾಷಣ ಕಂಡಿಕೆ-176 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು "ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸ್ಪೋಕನ್ ಇಂಗ್ಲೀಷ್ ಹಾಗೂ ವ್ಯಕ್ತಿತ್ವ ವಿಕಸನದ ತರಬೇತಿಗಳನ್ನು 5.00 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾರಂಭಿಸಲಾಗುವುದು" ಎಂದು ಘೋಷಿಸಿರುತ್ತಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಟ್ಟು 1139 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿದ್ದು, ಇದರಲ್ಲಿ 69,867 ಮಂಜೂರಾತಿ ಸಂಖ್ಯಾಬಲದ 630 ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 58,063 ಮಂಜೂರಾತಿ ಸಂಖ್ಯಾಬಲವಿರುವ 509 ಬಾಲಕರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಇರುತ್ತವೆ. ಈ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಂದ ಬಂದಿದ್ದು, ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆದಿರುತ್ತಾರೆ. ಇಂತಹ ವಿದ್ಯಾರ್ಥಿಗಳನ್ನು ಅವರ ಮುಂದಿನ ಜೀವನದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಪಡೆಯಲು ಹಾಗೂ ಅವರ ವ್ಯಕ್ತಿತ್ವ ವಿಕಸನಕ್ಕಾಗಿ ಸಮಗ್ರವಾದ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಆಯವ್ಯಯದ ಭಾಷಣದ ಘೋಷಣೆಯಂತೆ "ಸ್ಫೂರ್ತಿಯ ನಡೆಗೆ" ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಲು ನಿರ್ಣಯಿಸಲಾಗಿದೆ.

ಈ ಮೆಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 227 ಬಿಎಂಎಸ್ 2022,**
**ಬೆಂಗಳೂರು, ದಿನಾಂಕ:04-05-2022**

ಈ ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-176 ರಲ್ಲಿ ಘೋಷಿಸಿರುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಸ್ಪೋಕನ್ ಇಂಗ್ಲೀಷ್ ಹಾಗೂ ವ್ಯಕ್ತಿತ್ವ ವಿಕಸನದ ತರಬೇತಿಗಳನ್ನು ರಾಜ್ಯವಲಯದ ಅನುದಾನ ಲೆಕ್ಕಶೀರ್ಷಿಕೆ:2225-03-277-2-37(59) ರಡಿಯಲ್ಲಿ ರೂ.5.00 ಕೋಟಿಗಳ ವೆಚ್ಚದಲ್ಲಿ ಸ್ಫೂರ್ತಿಯ ನಡೆ ಎಂಬ ಹೊಸ ಯೋಜನೆಯ ಮೂಲಕ ಪ್ರಾರಂಭಿಸಲು ಈ ಕೆಳಕಂಡ ಮಾರ್ಗಸೂಚಿಗಳಂತೆ ಹಾಗೂ ಷರತ್ತುಗಳಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

---2

4/5/22

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಸ್ಪೋಕನ್ ಇಂಗ್ಲೀಷ್ ಮತ್ತು ವ್ಯಕ್ತಿತ್ವ ವಿಕಸನದ ತರಬೇತಿಗಾಗಿ ಸ್ಪೂರ್ತಿಯ ನಡೆ ಎಂಬ ಹೊಸ ಯೋಜನೆಯ ಮಾರ್ಗಸೂಚಿಗಳು.**

1. **ಯೋಜನೆಯ ಉದ್ದೇಶ**:- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 1139 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿದ್ದು, ಸುಮಾರು 1.27 ಲಕ್ಷ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯಾಬಲವನ್ನು ಹೊಂದಿದೆ. ಹೆಚ್ಚಿನ ವಿದ್ಯಾರ್ಥಿಗಳು ತಮ್ಮ ಶಾಲಾ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಪಡೆದಿರುತ್ತಾರೆ. ಆದ್ದರಿಂದ ಇಂಗ್ಲಿಷ್‌ನಲ್ಲಿ ಸಂಭಾಷಿಸುವುದು ಸವಾಲಿನ ಸಂಗತಿಯಾಗಿದ್ದು ಅದನ್ನು ನಿವಾರಿಸಲು ಸತತ ಮೂಲಭೂತ ತರಬೇತಿ ಅತ್ಯಗತ್ಯವಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸವು ಸಹ ಹೆಚ್ಚಾಗುತ್ತದೆ. ಜೊತೆಗೆ ಉದ್ಯೋಗ ಸಿದ್ಧತೆಗಾಗಿ ಸ್ಪೋಕನ್ ಇಂಗ್ಲಿಷ್‌ನ ಭಾಷಾಜ್ಞಾನ ಅವಶ್ಯಕವಿದ್ದು, ಉದ್ಯೋಗ ಅವಕಾಶಗಳನ್ನು ಹೆಚ್ಚಿಸುತ್ತದೆ. ಆದಕಾರಣ ಪ್ರತಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಜೂನ್-2022 ರಿಂದ 10 ತಿಂಗಳ ಕಾಲ ಒಂದು ತಿಂಗಳಲ್ಲಿ 15 ಸ್ಪೋಕನ್ ಇಂಗ್ಲಿಷ್ ತರಬೇತಿ ಅವಧಿಗಳನ್ನು ನಡೆಸಲಾಗುವುದು. ಸದರಿ ತರಬೇತಿ ಅವಧಿಗಳನ್ನು ಆಸಕ್ತಿಯುಳ್ಳ ನುರಿತ ಸರ್ಕಾರಿ ಪದವಿ ಪೂರ್ವ ಇಂಗ್ಲಿಷ್ ಉಪನ್ಯಾಸಕರ ಸೇವೆಗಳ ಮೂಲಕ ನಡೆಸುವುದು. ಮತ್ತು ವ್ಯಕ್ತಿತ್ವ ವಿಕಸನಕ್ಕಾಗಿ ಪ್ರತಿ ತಿಂಗಳು ಎಲ್ಲಾ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಜಿಲ್ಲೆಯಲ್ಲಿ ನುರಿತ ವಿಷಯ ತಜ್ಞರ ಮೂಲಕ ವಿಷಯಾಧಾರಿತ ತರಬೇತಿಯನ್ನು ತಿಂಗಳಲ್ಲಿ ಇಂತಹ ನಾಲ್ಕು ತರಬೇತಿ ಅವಧಿಗಳನ್ನು ಈ ಆದೇಶದಲ್ಲಿ ನಿಗಧಿಪಡಿಸಿರುವ ವಿಷಯದ ಮೇಲೆ ನಡೆಸುವುದು.
2. **ಯೋಜನೆಯ ಗುರಿಗಳು ಮತ್ತು ಕಾಲಾವಧಿ:-**

| ಕ್ರ ಸಂ | ಯೋಜನೆಯ ಗುರಿಗಳು | ಕಾಲಾವಧಿ |
|---|---|---|
| 01 | ಎಲ್ಲಾ 1139 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಧ್ಯಕ್ಷತೆಯಲ್ಲಿನ ಸಮಿತಿಯ ಮೂಲಕ ಸ್ಥಳೀಯವಾಗಿ ಗುರುತಿಸಲ್ಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕರ ಮೂಲಕ ಪ್ರತಿ ತಿಂಗಳು 15 ಸ್ಪೋಕನ್ ಇಂಗ್ಲಿಷ್ ತರಬೇತಿ ಅವಧಿಗಳನ್ನು ಪ್ರಾರಂಭಿಸುವುದು ಮತ್ತು ನಡೆಸುವುದು ಹಾಗೂ ವ್ಯಕ್ತಿತ್ವ ವಿಕಸನದ ವಿಷಯಾಧಾರಿತ ತರಬೇತಿಗೆ ಇದೆ ಸಮಿತಿ ಮೂಲಕ ಸ್ಥಳೀಯವಾಗಿ ಗುರುತಿಸಲ್ಪಟ್ಟ ನುರಿತ ಸಂಪನ್ಮೂಲ ವ್ಯಕ್ತಿಗಳು/ವಿಷಯ ಪರಿಣಿತರ ಮೂಲಕ ಈ ಆದೇಶದಲ್ಲಿ ತಿಂಗಳುವಾರು ನಿಗಧಿ ಪಡಿಸಿರುವ ವಿಷಯದ ಮೇಲೆ 4 ತರಬೇತಿ ಅವಧಿಗಳನ್ನು ಪ್ರಾರಂಭಿಸುವುದು ಮತ್ತು ನಡೆಸುವುದು. | ಜೂನ್ 2022-ಮಾರ್ಚ್ 2023. |

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ತಮ್ಮ ಜಿಲ್ಲೆಯಲ್ಲಿ ಇರುವ ಎಲ್ಲಾ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸ್ಪೂರ್ತಿಯ ನಡೆ ಯೋಜನೆ ಅಡಿಯಲ್ಲಿ ತರಬೇತಿಯ ಅವಕಾಶವನ್ನು ಕಲ್ಪಿಸಲು

---3

4/5/22

ನಿಯಮಾನುಸಾರ ಕ್ರಮವಹಿಸುವುದು. ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ರೂಪುರೇಷೆಗಳನ್ನು ತಯಾರು ಮಾಡಲು, ಜಿಲ್ಲಾ ಪಂಚಾಯತ್ ಹಂತದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಉಪ ನಿರ್ದೇಶಕರು, ಪದವಿ-ಪೂರ್ವ ಶಿಕ್ಷಣ ಇಲಾಖೆ, ಉಪ ನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ (ಸದಸ್ಯ ಕಾರ್ಯದರ್ಶಿ) ಒಳಗೊಂಡ ಸಮಿತಿಯನ್ನು ರಚಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಯೋಜನೆ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು.

4. ಪ್ರತಿ ಮೆಟ್ರಿಕ್-ನಂತರದ ಬಾಲಕರ ವಿದ್ಯಾರ್ಥಿನಿಲಯ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಸ್ಪೋಕನ್ ಇಂಗ್ಲಿಷ್ ತರಬೇತಿ ವಾರಕ್ಕೆ ನಾಲ್ಕು ದಿನ, (ಒಂದು ತರಬೇತಿ ದಿನಾಂಕದಿಂದ ಮುಂದಿನ ತರಬೇತಿ ದಿನಾಂಕದವರೆಗೆ ಕನಿಷ್ಟ 1 ದಿನದ ಅಂತರವಿರಿಸಿ) ಪ್ರತಿ ಅವಧಿಗೆ 60 ನಿಮಿಷಗಳ ಸಮಯ ನಿಗದಿಪಡಿಸಿ, ಒಟ್ಟು ತಿಂಗಳಿಗೆ 15 ತರಬೇತಿ ಅವಧಿಗಳು ತೆಗೆದುಕೊಳ್ಳಲು ನಿಯಮಾನುಸಾರ ಅವಕಾಶ ಮಾಡುವುದು. ಮೆಟ್ರಿಕ್ ನಂತರದ ವಿದ್ಯಾರ್ಥಿಯರಿಗೆ ಸ್ಪೋಕನ್ ಇಂಗ್ಲಿಷ್ ತರಬೇತಿಯನ್ನು ವಿದ್ಯಾರ್ಥಿನಿಲಯವಾರು ಆಸಕ್ತಿ ಇರುವ ನುರಿತ ಸರ್ಕಾರಿ ಪದವಿ ಪೂರ್ವ ಇಂಗ್ಲಿಷ್ ಉಪನ್ಯಾಸಕರ ಸೇವೆಗಳ ಮೂಲಕ ನೀಡುವುದು. ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರಿಗೆ ಸ್ಪೋಕನ್ ಇಂಗ್ಲಿಷ್ ತರಬೇತಿಯನ್ನು ವಿದ್ಯಾರ್ಥಿನಿಲಯವಾರು ನುರಿತ ಮಹಿಳಾ ಸರ್ಕಾರಿ ಪದವಿ ಪೂರ್ವ ಇಂಗ್ಲಿಷ್ ಉಪನ್ಯಾಸಕರ ಸೇವೆಗಳ ಮೂಲಕ ನೀಡುವುದು. ಯಾವುದೇ ತರಬೇತಿದಾರರಿಗೆ ಎರಡಕ್ಕಿಂತ ಹೆಚ್ಚು ವಿದ್ಯಾರ್ಥಿನಿಲಯಗಳನ್ನು ತರಬೇತಿಗೆ ವಹಿಸಬಾರದು.

5. ವ್ಯಕ್ತಿತ್ವ ವಿಕಸನದ ತರಬೇತಿಗೆ ಪ್ರತಿ ಭಾನುವಾರದಂದು ಪ್ರತಿ ತರಬೇತಿ ಅವಧಿಗೆ ಕನಿಷ್ಟ 60 ನಿಮಿಷಗಳ ಸಮಯ ನಿಗದಿಪಡಿಸಿ, ಒಟ್ಟು ತಿಂಗಳಿಗೆ 4 ತರಬೇತಿ ಅವಧಿಗಳು ತೆಗೆದುಕೊಳ್ಳಲು ನಿಯಮಾನುಸಾರ ಅವಕಾಶ ಮಾಡುವುದು. ಈ ತರಬೇತಿಗಳು ಎಲ್ಲಾ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ನಡೆಸುವುದು ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರಿಗೆ ವ್ಯಕ್ತಿತ್ವ ವಿಕಸನ ಮತ್ತು ತಿಂಗಳುವಾರು ವಿಷಯಾಧಾರಿತ ತರಬೇತಿಯನ್ನು ನುರಿತ ಮಹಿಳಾ ಸಂಪನ್ಮೂಲ ವ್ಯಕ್ತಿಗಳು/ಮಹಿಳಾ ವಿಷಯ ಪರಿಣಿತರನ್ನು ಗುರುತಿಸಿ, ಅವರ ಮೂಲಕವೇ ತರಬೇತಿಯನ್ನು ಕೊಡಿಸಲು ಕ್ರಮ ವಹಿಸುವುದು. ಯಾವುದೇ ವಿಷಯ ಪರಿಣಿತರಿಗೆ ಎರಡಕ್ಕಿಂತ ಹೆಚ್ಚು ವಿದ್ಯಾರ್ಥಿನಿಲಯಗಳನ್ನು ತರಬೇತಿಗೆ ವಹಿಸಬಾರದು.

6. ವ್ಯಕ್ತಿತ್ವ ವಿಕಸನಕ್ಕಾಗಿ ಎಲ್ಲಾ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ತಿಂಗಳುವಾರು ವಿಷಯಾಧಾರಿತ ತರಬೇತಿಯನ್ನು ಗೊತ್ತುಪಡಿಸಿ, ಆ ವಿಷಯದ ಮೇಲೆ ತಿಂಗಳಿಗೆ 04 ತರಬೇತಿ ಅವಧಿಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳನ್ನು ಸಂಬಂಧಿತ ವಿಷಯಗಳ ಕುರಿತು ಸಮಕಾಲೀನ ಜ್ಞಾನ ಮತ್ತು ಕೌಶಲ್ಯಗಳನ್ನು ನೀಡುವುದು. ಪ್ರತಿ ತಿಂಗಳ ವ್ಯಕ್ತಿತ್ವ ವಿಕಸನ ವಿಷಯಾಧಾರಿತ ತರಬೇತಿ ವಿಷಯಗಳು ಈ ಕೆಳಗಿನಂತಿರುತ್ತದೆ.

| ಕ್ರ ಸಂ | ತಿಂಗಳ ವಿಷಯ | ತಿಂಗಳು | ವಿಷಯ ಪರಿಣತರ ಬಗ್ಗೆ ಸಲಹೆಗಳು |
|---|---|---|---|
| 01 | ಆರ್ಥಿಕ ಸಾಕ್ಷರತೆ ಮತ್ತು ಹೂಡಿಕೆ ಅವಕಾಶಗಳು | ಜೂನ್ 2022 | ಜಿಲ್ಲೆಯ ಲೀಡ್ ಬ್ಯಾಂಕ್ ಮ್ಯಾನೇಜರ್ / ನುರಿತ ಬ್ಯಾಂಕ್ ಮ್ಯಾನೇಜರ್ /ನುರಿತ ಅರ್ಥಶಾಸ್ತ್ರ/ವಾಣಿಜ್ಯಶಾಸ್ತ್ರ ಉಪನ್ಯಾಸಕರು |
| 02 | ನಾಗರೀಕ ಹಕ್ಕುಗಳು ಮತ್ತು ಜವಬ್ದಾರಿಗಳು | ಜೂನ್ 2022 | ಜಿಲ್ಲೆಯ ನುರಿತ ಕಾನೂನು ತಜ್ಞರು/ಕಾನೂನು ಪ್ರಾಧ್ಯಾಪಕರು / ವಕೀಲರು |

---4

4/5/22

| | | | |
|---|---|---|---|
| 03 | ಎಕ್ಸ್ ಲ್, ವರ್ಡ್, ಪವರ್‌ಪಾಯಿಂಟ್, ಹಾಗೂ ಸ್ಪ್ರೆಡ್ ಶೀಟ್ | ಆಗಸ್ಟ್ 2022 | ಪದವಿ ಪೂರ್ವ ಕಾಲೇಜುಗಳಲ್ಲಿ /ಪದವಿ ಕಾಲೇಜುಗಳ್ಲಲ್ಲಿ ಬೋಧನೆ ನೀಡುತ್ತಿರುವ ನುರಿತ ಗಣಕಶಾಸ್ತ್ರ ಉಪನ್ಯಾಸಕರು/ಸಹಾಯಕ ಪ್ರಾಧ್ಯಾಪಕರು |
| 04 | ಕಾನೂನು ಸಾಕ್ಷರತೆ | ಸೆಪ್ಟಂಬರ್ 2022 | ಕಾನೂನು ಸೇವೆಯಲ್ಲಿ ಇರುವ ನುರಿತ ವಕೀಲರು |
| 05 | ಪ್ರಾಥಮಿಕ ಚಿಕಿತ್ಸೆ, ಆಹಾರ ಮತ್ತು ಪೋಷಣೆ | ಅಕ್ಟೋಬರ್ 2022 | ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಹಿರಿಯ ವೈದ್ಯರು |
| 06 | ಭಾರತ ಸಂವಿಧಾನ ಮತ್ತು ನಾಗರೀಕತೆ | ನವೆಂಬರ್ 2022 | ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧನೆ ಮಾಡುತ್ತಿರುವ ರಾಜ್ಯಶಾಸ್ತ್ರ ಉಪನ್ಯಾಸಕರು |
| 07 | ಸಾಮಾಜಿಕ ಮಾಧ್ಯಮ ನಿರ್ವಹಣೆ ಮತ್ತು ಅಂತರ್ ಜಾಲ ಬಳಕೆ | ಡಿಸೆಂಬರ್ 2022 | ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧನೆ ನೀಡುತ್ತಿರುವ ಗಣಕಶಾಸ್ತ್ರ ಉಪನ್ಯಾಸಕರು |
| 08 | ಉದ್ಯೋಗಾವಕಾಶಗಳು | ಜನವರಿ 2023 | ಕನಿಷ್ಟ 8 ವಿಭಿನ್ನ ಉದ್ಯೋಗಗಳನ್ನು ಗುರುತಿಸಿ ಜಿಲ್ಲೆಯಲ್ಲಿ ಸದರಿ ಉದ್ಯೋಗಗಳಲ್ಲಿ ಹೆಸರನ್ನು ಗಳಿಸಿರುವ ಗಣ್ಯರ ಮೂಲಕ ಸ್ಪೂರ್ತಿ ನೀಡುವಂತಹ ಉಪನ್ಯಾಸ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡುವ ತರಬೇತಿ |
| 09 | ಉದ್ಯೋಗಾವಕಾಶಗಳು(Contd) | ಫೆಬ್ರುವರಿ 2023 | |
| 10 | ವಿದ್ಯಾರ್ಥಿನಿಲಯಗಳಲ್ಲಿ ಹಳೆಯ ಯಶಸ್ವಿ ವಿದ್ಯಾರ್ಥಿಗಳ (hostel alumni) ಮೂಲಕ ಉಪನ್ಯಾಸಗಳು | ಮಾರ್ಚ್ 2023 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಹಳೆಯ ಯಶಸ್ವಿ ವಿದ್ಯಾರ್ಥಿಗಳ ಮೂಲಕ ಸ್ಪೂರ್ತಿ ನೀಡುವಂತಹ ಉಪನ್ಯಾಸ ಹಾಗೂ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ |

7. ಸದರಿ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮುನ್ನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ನಿಲಯ ಮೇಲ್ವಿಚಾರಕರು ಮತ್ತು ಎಲ್ಲಾ ಸ್ಪೋಕನ್ ಇಂಗ್ಲಿಷ್ ಮತ್ತು ವಿಷಯಾಧಾರಿತ ವ್ಯಕ್ತಿತ್ವ ವಿಕಸನ ತರಬೇತಿದಾರರನ್ನು ಒಳಗೊಂಡಂತೆ

---5

4/5/22

ತರಬೇತಿಯ ಉದ್ದೇಶ, ಅವಧಿ ವೇಳಾಪಟ್ಟಿ, ತರಬೇತಿಯ ಪೂರ್ವಸಿದ್ಧತೆ ಕುರಿತು ಸಮಾಲೋಚಿಸಲು ಜಿಲ್ಲಾ ಹಂತದಲ್ಲಿ ಜಿಲ್ಲಾ ಅಧಿಕಾರಿ,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮಾರ್ಗದರ್ಶನದಲ್ಲಿ ಕಾರ್ಯಾಗಾರವನ್ನು ನಡೆಸುವುದು.

8. ಸದರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ತರಬೇತಿಗೆ ನಿಗದಿಯಾದ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಹಾಗೂ ತರಬೇತಿದಾರರ ಹಾಜರಾತಿಯ ಹಾಗೂ ಅವರಿಗೆ ನೀಡುವ ಗೌರವ ಧನದ ವಿವರಗಳನ್ನು ವಿದ್ಯಾರ್ಥಿ ನಿಲಯದ ಸೂಚನಾ ಫಲಕದಲ್ಲಿ ಹಾಕುವುದು.
9. ತರಬೇತಿ ನೀಡುವ ಸಂದರ್ಭದಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರು ಹಾಜರಿರತಕ್ಕದ್ದು.
10. ತರಬೇತಿ ನೀಡಲು ಭರಿಸಬಹುದಾದ ಒಟ್ಟಾರೆ ಮೊತ್ತ ಕೆಳಕಂಡಂತೆ ವಿವರಿಸಲಾಗಿದೆ:

| ಕ್ರ.ಸಂ. | ವಿವರ | ಅಂದಾಜು ಮೊತ್ತ |
|---|---|---|
| 1 | ಪ್ರತಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿ ಪ್ರತಿ ತಿಂಗಳು 15 ಸ್ಪೋಕನ್ ಇಂಗ್ಲಿಷ್ ತರಬೇತಿ ಅವಧಿಗಳನ್ನು(ಪ್ರತಿ ತರಬೇತಿ ಅವಧಿಗೆ 60 ನಿಮಿಷಗಳ ಸಮಯ ನಿಗದಿಪಡಿಸಿ) ಒಟ್ಟು ತಿಂಗಳಿಗೆ ನೀಡಬಹುದಾದ ಗರಿಷ್ಟ ಗೌರವ ಧನ ರೂ.3000 ಪ್ರತಿ ತಿಂಗಳಿಗೆ | ಪ್ರತಿ ತಿಂಗಳಿಗೆ ರೂ.3000 ರಂತೆ, ಹತ್ತು ತಿಂಗಳುಗಳಿಗೆ 3000*10=ಒಟ್ಟು ರೂ.30,000/- |
| 2 | ವ್ಯಕ್ತಿತ್ವ ವಿಕಸನದ ಒಂದು ತರಬೇತಿ ಅವಧಿ (ಪ್ರತಿ ತರಬೇತಿ ಅವಧಿಗೆ 60 ನಿಮಿಷಗಳ ಸಮಯ ನಿಗದಿಪಡಿಸಿ)ಗರಿಷ್ಟ ಗೌರವ ಧನ ರೂ.350 ಪ್ರತಿ ತರಬೇತಿ ಅವಧಿಗೆ ಹಾಗು ಒಟ್ಟು ಗರಿಷ್ಟ ಗೌರವ ಧನ ರೂ.1400 ಪ್ರತಿ ತಿಂಗಳಿಗೆ | ಪ್ರತಿ ತಿಂಗಳಿಗೆ 4 ವಿಷಯಯಾಧಾರಿತ ತರಬೇತಿ ಅವಧಿಗಳಿಗೆ ರೂ.1,400 ಪ್ರತಿ ತಿಂಗಳಿಗೆ ಹಾಗೂ ಹತ್ತು ತಿಂಗಳುಗಳಿಗೆ ರೂ.1,400*10=ಒಟ್ಟು ರೂ.14,000 |

11. ತರಬೇತಿದಾರರಿಗೆ ಗೌರವ ಧನ ಪಾವತಿಗೆ, ತರಬೇತಿದಾರರ ಹಾಜರಾತಿ ಹಾಗೂ ನಿಗದಿತ ವಿಷಯ ಸೂಚಿಯ (course content) ಪ್ರಕಾರ ತರಬೇತಿಯನ್ನು ನೀಡಿದ ವರದಿಯನ್ನು ಪ್ರತಿ ತಿಂಗಳು ಸಂಬಂಧಪಟ್ಟ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಂದ ತಾಲ್ಲೂಕು ಕಲ್ಯಾಣ ಅಧಿಕಾರಿ ಮೂಲಕ ಪಡೆದು ಗೌರವ ಧನವನ್ನು ನೇರವಾಗಿ ತರಬೇತುದಾರರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು ನಿಯಮಾನುಸಾರ ಕ್ರಮ ತೆಗೆದುಕೊಳ್ಳುವುದು.
12. ರಾಜ್ಯದಲ್ಲಿ ಸಂಪೂರ್ಣ ಯೋಜನೆಯ ಮೇಲುಸ್ತುವಾರಿಯನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ವಹಿಸುವುದು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ತರಬೇತಿ ನಡೆಸಿರುವ ಕುರಿತು ಹಾಗೂ ಕಲಿಕೆಯ ಪರಿಣಾಮದ ಕುರಿತು ಪ್ರತಿ ತಿಂಗಳು ವಿವರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
13. ಆಯುಕ್ತಾಲಯದಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸಿ ಅನುದಾನವನ್ನು ಪ್ರತಿ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆಗೊಳಿಸುವುದು.
14. ಪ್ರಸ್ತಾಪಿಸಲಾಗಿರುವ ಸ್ಪೋಕನ್ ಇಂಗ್ಲೀಷ್ ಮತ್ತು ವ್ಯಕ್ತಿತ್ವ ವಿಕಸನದ ತರಬೇತಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ರಾಜ್ಯವಲಯದ ಅನುದಾನ ಲೆಕ್ಕಶೀರ್ಷಿಕೆ:2225-03-277-2-37(59) ರಡಿಯಲ್ಲಿ ಭರಿಸತಕ್ಕದ್ದು. ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಕಾರ್ಯಕ್ರಮಗಳನ್ನು ಜಾರಿಗೊಳಿಸತಕ್ಕದ್ದು.

---6

[signature] 4/5/22

15. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರು ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಅನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಸದರಿ ಕಾರ್ಯಕ್ರಮವನ್ನು ನಿಯಮಾನುಸಾರವಾಗಿ/ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 247 ವೆಚ್ಚ-3/2022 ದಿನಾಂಕ:12.04.2022 ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿಎಸ್ 37 ಐಎಂಎಂ 2022 ದಿನಾಂಕ: 19.04.2022ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

Shaheenparveen 04/05/2022

(ಶಾಹೀನ್ ಪರ್ವೀನ್ . ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
6. ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
7. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

} (5–7) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮುಖಾಂತರ

8. ರಾಜ್ಯ ಖಜನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಧಾನಸೌಧ. ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ , ವಿಕಾಸ ಸೌಧ ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.





